# ಬಂಟ್ವಾಳ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ.

**ಸಿ ಸಿ ನಂ. ః 324/2019** **ಪಿಡಬ್ಲ್ಯೂ ః 2**

**ಹೆಸರು** ః ಮೋಹನ್ ಎಲ್

**ತಂದೆಯ ಹೆಸರು** ః ದಿ ಲಿಂಗಪ್ಪ ಶೆಟ್ಟಿ

**ವಯಸ್ಸು** ః **55 ವರ್ಷ**

**ಉದ್ಯೋಗ** ః ಎ ಎಸ್ ಐ ಕೊಣಾಜೆ ಪೊಲೀಸ್ ಠಾಣೆ

**ವಾಸಸ್ಥಳ** ః ಕೊಣಾಜೆ

ದಿః **29.08.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ః ಸಹಾಯಕ ಸರ್ಕಾರಿ ಅಭಿಯೋಜಕರಿಂದః**

ನಾನು **30.01.2021**ರಿಂದ ಇಲ್ಲಿಯವರೆಗೆ ಕೊಣಾಜೆ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಮಾನ್ಯ ಘನ ನ್ಯಾಯಾಲಯದ ಸಿಸಿ ನಂ **324/2019**ರಲ್ಲಿ ಆರೋಪಿ ಮನೋಜ್ ಪೂಜಾರಿಯವರ ಪತ್ತೆ ಮತ್ತು ಪ್ರೊಕ್ಲಮೇಶನ್ ಬಗ್ಗೆ ಕರ್ತವ್ಯಕ್ಕೆ ನೇಮಿಸಿದಂತೆ ದಿನಾಂಕ **29.02.2023** ರಂದು ಆತನ ಪತ್ತೆ ಬಗ್ಗೆ ಪ್ರೊಕ್ಲಮೇಶನ್ ಜಾರಿ ಬಗ್ಗೆ ವಿಳಾಸಕ್ಕೆ ಹೋಗಿ ವಿಚಾರಿಸಿಕೊಂಡಲ್ಲಿ, ಆಕೆಯ ಪತ್ನಿಯು ಮೇಲ್ಕಂಡ ಪ್ರಕರಣ ದಾಖಲಾದ ಬಳಿಕ ತನ್ನನ್ನು ಮತ್ತು ಮಕ್ಕಳನ್ನು ಬಿಟ್ಟು ಹೋಗಿದ್ದು ಇಲ್ಲಿಯವರೆಗೆ ಎಲ್ಲಿದ್ದಾರೆ ಎಂದು ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಅಲ್ಲದೇ ಸ್ಥಳೀಯ ನಿವಾಸಿಗಳಲ್ಲಿ, ಅಕ್ಕಪಕ್ಕದವರಲ್ಲಿ ಮತ್ತು ಬಾತ್ಮೀದಾರರಲ್ಲಿ ವಿಚಾರಿಸಿಕೊಂಡಲ್ಲಿ ಆತನು ಸುಮಾರು ವರ್ಷಗಳಿಂದ ತಲೆಮರೆಸಿಕೊಂಡು ಎಲ್ಲಿ ವಾಸವಿದ್ದಾನೆ ಎಂದು ಸುಳಿವು ಇಲ್ಲ ಎಂದು ತಿಳಿಸಿರುತ್ತಾರೆ.

ಘನ ನ್ಯಾಯಾಲಯದ ಆದೇಶದಂತೆ ದಿನಾಂಕ 30.03.2023 ರ ಒಳಗಾಗಿ ಆರೋಪಿತನನ್ನು ಕಂಡಲ್ಲಿ ಹಾಜರುಪಡಿಸುವಂತೆ ಹರೇಕಳ ನಾಗಮೂಲೆ ಮನೆ ಪಕ್ಕದಲ್ಲಿ, ಆಲಡ್ಕ, ಪಾವೂರು

ಬೈತಾಲ್, ನಲ್ಲಿ ಟಂ ಟಂ  ಮುಖೇನ ತಿಳಿಸಿ, ಪಂಚರ ಸಮಕ್ಷಮ ಮಹಜರು ಬರೆದು, ಪ್ರೊಕ್ಲಮೇಶನ್ ಜಾರಿ ಮಾಡಲಾಗಿದೆ. ಈ ಮಹಜರನ್ನು ದಿ 29.02.2023ರಂದು 15.30 ರಿಂದ 16.00 ಗಂಟೆಯವರೆಗೆ ಬರೆದು ಪೂರೈಸಲಾಗಿದೆ. ಇದಕ್ಕೆ ಪಂಚರಾಗಿ ಜಯರಾಜ್, ಕಾರ್ತಿಕ್ ಮತ್ತು ಆರೋಪಿತನ ಪತ್ನಿ ಅಶ್ವಿನಿಯವರು ಸಹಿ ಮಾಡಿರುತ್ತಾರೆ.

ಸದರಿ ಮಹಜರನ್ನು ಈಗ ನೋಡುತ್ತಿದ್ದು ನಿಪಿ-**3** ಎಂದು ಸಾಕ್ಷಿಯ ಸಹಿ ಯನ್ನು ನಿಪಿ-**3**ಎ ಎಂದು, ಮತ್ತು ಸಾಕ್ಷಿದಾರರ ಸಹಿಗಳನ್ನು ಕ್ರಮವಾಗಿ ನಿಪಿ-**3**ಬಿ ಯಿಂದ **3**ಡಿ ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ</u>

ಆರೋಪಿತನು ತಲೆಮರಿಸಿಕೊಂಡಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ

**ನ ಉ ರೀ ಬ ನ್ಯಾ ಬಿ ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಹಿರಿಯಸಿವಿಲ್‌ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ಬಂಟ್ವಾಳ.**